# ಹನ್ನೊಂದು ನೆಲೆಗಳು




ದಿಗಂಬರ ಜೈನ ಟ್ರಸ್ಟ

# ಹನ್ನೊಂದು ನೆಲೆಗಳು

● ರಚನಾಕಾರರು ●

**ಸೌ. ಧವಲಶ್ರೀ ಅ. ಪಾಟೀಲ**

'ಶುದ್ಧಾತ್ಮಸದನ' ಶಹಾಪುರ, ಬೆಳಗಾವಿ.

● ಪ್ರಕಾಶಕರು ●

ದಿಗಂಬರ ಜೈನ ಟ್ರಸ್ಟ-ಅಧ್ಯಾತ್ಮ ಪ್ರಕಾಶನ ಸಂಸ್ಥೆ,

ಬೆಂಗಳೂರು.

● ಮೊದಲನೇ ಆವೃತ್ತಿ - ೩೦೦೦ ಪ್ರತಿಗಳು
ಕುಂದಾದ್ರಿ ಶಿಬಿರದ ಶುಭ ಸಂದರ್ಭ

(ಸಂಪೂರ್ಣ ಹಕ್ಕು ಸುರಕ್ಷಿತ)

● ಬೆಲೆ :- ಕೇವಲ ಐದು ರೂಪಾಯಿ

● ದೊರಕುವ ಸ್ಥಳ
ದಿಗಂಬರ ಜೈನ ಟ್ರಸ್ಟ ಅಧ್ಯಾತ್ಮ ಪ್ರಕಾಶನ ಸಂಸ್ಥೆ
೧೪೧, ರಂಗಸ್ವಾಮಿ ಗುಡಿ ಬೀದಿ, ಬೆಂಗಳೂರು.

ಶ್ರೀ ಬಿ. ಜಿ. ಬಖೇಡಿ,
'ಮಾತಾಪಿತಾ ಸದನ'
ಎಸ್.ಪಿ.ಎಮ್.ರೋಡ, ಶಹಾಪುರ, ಬೆಳಗಾವಿ.

● ಮುದ್ರಕರು :
ಇಮೇಜ ಪ್ರಿಂಟ್ಸ,
೨೯೩೩, ಕಚೇರಿಗಲ್ಲಿ, ಶಹಾಪೂರ, ಬೆಳಗಾವಿ.
ದೂರವಾಣಿ : ೨೪೨೭೧೯೩

# ಪ್ರಕಾಶಕೀಯ

ಶ್ರಾವಕನ ಹನ್ನೊಂದು ನೆಲೆಗಳ ಯಥಾರ್ಥ ಸ್ವರೂಪದ ನಿರೂಪಣೆ ಮಾಡುವಂಥ ಈ ಕಿರು ಕೃತಿಯನ್ನು ನಮ್ಮ ಸಂಸ್ಥೆಯ ಮೂಲಕ ಪ್ರಕಟಪಡಿಸಲು ನಮಗೆ ತುಂಬ ಸಂತೋಷವಾಗುತ್ತಿದೆ. ಏಕೆಂದರೆ ಅನಂತಾನುಬಂಧೀ ಕಷಾಯ ಚೌಕಡಿಯ ಅಭಾವದ ಮೂಲಕ ಅಂತರ್ಯದಲ್ಲಿ ಯಾವ ಅತೀಂದ್ರಿಯ ಆನಂದದ ಅನುಭವವಾಗುತ್ತದೆ ಎಂದರೆ ಸಮ್ಯಗ್ದರ್ಶನವಾಗುತ್ತದೆ ಆಗ ಜೀವದ ಶ್ರದ್ಧೆ ಮತ್ತು ಜ್ಞಾನಗಳೆರಡೂ ಸಮ್ಯಕ್ ಆಗುತ್ತವೆ. ಆದರಿಂದ ಸ್ವರೂಪದಲ್ಲಿ ಆಂಶಿಕ ಸ್ಥಿರತೆಯು ಪ್ರಕಟವಾಗುತ್ತದೆ. ಮೋಕ್ಷಮಾರ್ಗದ ಆರಂಭವಾಗುತ್ತದೆ. ಆದರೆ ಈ ಆಂಶಿಕ ಸ್ಥಿರತೆಯು ಚಾರಿತ್ರವೆಂಬ ಹೆಸರಿಗೆ ಪ್ರಾಪ್ತವಾಗುವುದಿಲ್ಲ ಮತ್ತು ಯಥಾರ್ಥ ಚಾರಿತ್ರದಿಂದಲೇ ಮೋಕ್ಷದ ಪ್ರಾಪ್ತಿಯಾಗುತ್ತದೆ.

ಅದೇ ಸಮ್ಯಗ್ದೃಷ್ಟಿಯು ಅಂತರ್ಬಾಹ್ಯ ಪುರುಷಾರ್ಥದ ಮೂಲಕ ಸ್ವರೂಪ ಸ್ಥಿರತೆಯನ್ನು ಹೆಚ್ಚಿಸಿಕೊಳ್ಳುತ್ತ ಅಪ್ರತ್ಯಾಖ್ಯಾನಾವರಣೀಯ ಕಷಾಯದ ಅಭಾವದ ಮೂಲಕ ಪಂಚಮಗುಣಸ್ಥಾನವನ್ನು ಪ್ರಾಪ್ತಿಮಾಡಿಕೊಳ್ಳುತ್ತಾನೆ, ಶ್ರಾವಕನಾಗುತ್ತಾನೆ. ಈ ಪ್ರಕಾರ ಸ್ವರೂಪ ಸ್ಥಿರತೆಯ ವೃದ್ಧಿ ಹಾಗೂ ರಾಗಾಂಶದ ಹಾನಿಯಾಗುವುದನ್ನೇ ನೆಲೆಯೆಂದು ಹೇಳಲಾಗುತ್ತದೆ. ನೆಲೆಗಳು ಹನ್ನೊಂದು ಇದ್ದು ಅವು ಅಂತರ್ಯದ ಶುದ್ಧಿಯ ವೃದ್ಧಿಯ ಅನುಸಾರ ಕ್ರಮದಿಂದ ಹೆಚ್ಚುತ್ತ ಹೋಗುತ್ತವೆ. ಮತ್ತು ಅಂತರ್ಯದ ಶುದ್ಧಿಯ ಅನುಸಾರ ಬಾಹ್ಯ ಪ್ರವೃತ್ತಿಯಲ್ಲೂ ಬದಲಾವಣೆಯಾಗುತ್ತ ಹೋಗುತ್ತದೆ. ಹೀಗೆ ಅಂತರ್ಬಾಹ್ಯ ಶುದ್ಧತೆಯು ಒಂದು ಇನ್ನೊಂದಕ್ಕೆ ಹೇಗೆ ಪೂರಕವಾಗಿದೆಯೆಂಬುದರ ಸುಂದರ ವರ್ಣನೆಯನ್ನು ಆಗಮ ಹಾಗೂ ಅಧ್ಯಾತ್ಮದ ಅನುಸಾರ ಮಾಡಲಾಗಿದ್ದು ಇದು ಎಲ್ಲರಿಗೂ ಅಧ್ಯಯನಯೋಗ್ಯವಿದೆ.

ಇದನ್ನು ಬೆಳಗಾವಿಯ ಸೌ. ಧವಲಶ್ರೀ ಅಣ್ಣಾಸಾಹೇಬ ಪಾಟೀಲ ಇವರು ಬರೆದುಕೊಟ್ಟಿದ್ದಾರೆ. ಅವರಿಗೆ ಅನೇಕ ಧನ್ಯವಾದಗಳು ಆದರಂತೆ ಈ ಪ್ರಥಮ ಪ್ರಕಾಶನದ ಸಂಪೂರ್ಣ ಖರ್ಚನ್ನು ತಾವೊಬ್ಬರೇ ವಹಿಸಿಕೊಂಡು ಹೆಸರಿನ ಮೋಹದಿಂದ ರಹಿತರಾದ ಆತ್ಮೀಯ ಸೋದರರಿಗೆ ಅನೇಕ ಧನ್ಯವಾದಗಳು.

ಕೊನೆಯದಾಗಿ ಇದನ್ನು ಸುಂದರವಾಗಿ ಮುದ್ರಿಸಿಕೊಟ್ಟ ಇಮೇಜ ಪ್ರಿಂಟ್ಸ ಪ್ರೆಸ್‌ನ ಮಾಲಿಕರಿಗೆ ಹಾಗೂ ಅಲ್ಲಿನ ಕರ್ಮಚಾರಿಗಳಿಗೆ ಅನೇಕ ಧನ್ಯವಾದಗಳು.

ಶ್ರೀ ಸಿ. ಬಿ. ಭಂಡಾರಿ
ಅಧ್ಯಕ್ಷರು - ದಿಗಂಬರ ಜೈನ ಟ್ರಸ್ಟ
ಬೆಂಗಳೂರು.

# ಮುನ್ನುಡಿ

ಜೈನ ದರ್ಶನದಲ್ಲಿ ಬರುವ ನಾಲ್ಕೂ ಅನುಯೋಗಗಳು ಜೀವದ ಉದ್ಧಾರ ಉನ್ನತಿಗೆ ಆಧಾರವಿದ್ದರೆ ಚರಣಾನುಯೋಗದಿಂದ ಜೀವದ ಜೀವನ ಮತ್ತು ಜೈನಾಚಾರದ ಪ್ರತ್ಯಕ್ಷ ಶೋಭೆಯಿದೆ. ದ್ರವ್ಯಾನುಯೋಗವು (ಅಧ್ಯಾತ್ಮವು) ಜೀವನಿಗೆ ತನ್ನತನದ ಅರಿವು ಮೂಡಿಸಲು ಸಹಕಾರಿಯಿದ್ದರೆ ಚರಣಾನುಯೋಗವು ಜೀವನಿಗೆ ತನ್ನ ಸ್ವರೂಪದಲ್ಲಿ ತಾನು ಸ್ಥಿರಗೊಳ್ಳಲು ಸಹಕಾರಿಯಾಗಿದೆ.

ಸ್ಯಾದ್ವಾದರೂಪ ಪರಮಾಗಮದ ಪ್ರಸಾದದಿಂದ ಸ್ವ-ಪರಗಳ ಭೇದಜ್ಞಾನಪೂರ್ವಕ ಆತ್ಮಾನುಭೂತಿಯನ್ನು ಪಡೆದ ಜೀವನು (ಸಮ್ಯಗ್ದೃಷ್ಟಿಯು) ಸಮಸ್ತ ಗುಣೀ ಜನರ ಉತ್ತಮ ಗುಣಗಳ ವಿಚಾರ ಮಾಡಿ ತನ್ನನ್ನು ತೀರ ಚಿಕ್ಕವನೆಂದು ತಿಳಿಯುತ್ತ, ಬಾಹ್ಯದಲ್ಲಿ ಭ್ರಮಿಸುತ್ತಿರುವ ತನ್ನ ಉಪಯೋಗವನ್ನು ನಿಜ ಸ್ವಭಾವದಲ್ಲಿ ಸ್ಥಿರಗೊಳಿಸುವ ಅಭ್ಯಾಸರೂಪವಾಗಿ ಭಗವಾನ ಸರ್ವಜ್ಞದೇವರು ಶ್ರಾವಕ ಧರ್ಮದಲ್ಲಿ ಪ್ರತಿಪಾದನೆ ಮಾಡಿದ ಹನ್ನೊಂದು ನೆಲೆಗಳ ಆರೋಹಣೆಯನ್ನು ಕ್ರಮದಿಂದ ಮಾಡುತ್ತಾನೆ.

ಜೈನ ದರ್ಶನವು ಆತ್ಮದರ್ಶನವಿರುವಂತೆ ಜೈನಾಚಾರವು ಆತ್ಮ ಸ್ಥಿರತೆಯೇ ಆಗಿದೆಯೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಚರಣಾನುಯೋಗದ ಶಾಸ್ತ್ರಗಳನ್ನು ಓದಬೇಕು, ಕೇಳಬೇಕು ಮತ್ತು ಅಭ್ಯಸಿಸಬೇಕಾಗುವುದು. ಆ ಆತ್ಮಸ್ಥಿರತೆಯ ಮೂಲಕವೇ ಪ್ರತ್ಯಕ್ಷ ಮೋಕ್ಷದ ಪ್ರಾಪ್ತಿಯಾಗುತ್ತದೆ. ಅಂಥ ಆತ್ಮಸ್ಥಿರತೆಯನ್ನು ಸರ್ವಸಂಗ ಪರಿತ್ಯಾಗಿಯಾಗಿ ಸಾಧಿಸುತ್ತಿರುವವನು ಸಾಧುವಿದ್ದರೆ ಆ ಸಾಧುತ್ವದ ಸಾಧನೆ (ಅಭ್ಯಾಸ) ಮಾಡುತ್ತಿರುವವನೇ ಶ್ರಾವಕನಿದ್ದಾನೆ. ಆ ಶ್ರಾವಕನು ಹಂತಹಂತವಾಗಿ ತನ್ನ ಪರಿಣಾಮದ ಮಲಿನತೆಯನ್ನು ಕಳೆದುಕೊಳ್ಳುವುದರ ಹೆಸರೇ ನೆಲೆಗಳ ಆರೋಹಣೆಯಿದೆ.

ಯಾವ ಪ್ರಕಾರ ಅಷ್ಟಕರ್ಮಗಳ ಹಾಗೂದೇಹದಸಂಯೋಗದಲ್ಲಿರುವಂಥ ಸಾಧುವು ಸಿದ್ಧಸದೃಶ ಭಾವ ವಿಶೇಷದಿಂದ ಸಂಚರಿಸುವ ಸಿದ್ಧನೆನಿಸಿಕೊಳ್ಳುತ್ತಾನೆ. ಅದೇ ಪ್ರಕಾರ ಗೃಹ ಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವಂಥ ಮತ್ತು ವಸ್ತ್ರಸಹಿತನಿರುವಂಥ ಈ ಶ್ರಾವಕನು ಯಥಾರ್ಥ ಶ್ರದ್ಧೆ, ಪವಿತ್ರವಿಚಾರ ಹಾಗೂ ನಿರ್ಮಲ ಆಚಾರದ ಮುಖ್ಯತೆಯಿಂದ ಮೋಕ್ಷಮಾರ್ಗಿಯಿದ್ದಾನೆ. ಪ್ರತಿಯೊಂದು ದ್ರವ್ಯದಲ್ಲಿ ಸಾಮಾನ್ಯ ಗುಣಗಳು ಅನಂತವಿದ್ದರೂ ಪ್ರಯೋಜನದ ಸಿದ್ಧಿಗೋಸ್ಕರ ಅಸ್ತಿತ್ವ ಮೊದಲಾದ ಕೇವಲ ಆರು ಗುಣಗಳ ಕಥನವನ್ನು ಆಗಮ ಗ್ರಂಥಗಳಲ್ಲಿ ಮಾಡಿದ್ದಾರೆ. ಅದರಂತೆ ಗೃಹಸ್ಥಾವಸ್ಥೆಯಲ್ಲಿ ನಿಂತಿರುವ ಈ ಸಾಧಕ ಜೀವದ ಪರಿಣಾಮವು ಪ್ರತಿ ಸಮಯ ಉತ್ಕರ್ಷಕ್ಕೆ ಪ್ರಾಪ್ತವಾಗುತ್ತಿದ್ದರೂ ಕೇವಲ ಹನ್ನೊಂದು ನೆಲೆಗಳ ರೂಪದಿಂದ ಆ ಉತ್ತರೋತ್ತರ ನಿರ್ಮಲತೆಯ ಕಥನ ಮಾಡಿದ್ದಾರೆ. ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಏರಬೇಕಾದರೆ ಆ ಜೀವದ ಪರಿಣಾಮದ ನಿರ್ಮಲತೆ ಹಾಗೂ ಜತೆಯಲ್ಲಿ ಆಚರಣೆಯ ದೃಢತೆಯನ್ನು ನಾವು ಜ್ಞಾನನೇತ್ರದಿಂದ ನೋಡಿದರೆ ನಮಗೆ ಆ ಜೀವದ ನಿರಂತರ ಪುರುಷಾರ್ಥದ ಅರಿವು ಮೂಡಿ ಬರಬಹುದಾಗಿದೆ.



# ಪೂರ್ವ ಪೀಠಿಕೆ

ಚತುರ್ಗತಿರೂಪದ ಸಂಸಾರದಲ್ಲಿ ಅನಾದಿಕಾಲದಿಂದ ಅಜ್ಞಾನದ ವಶವರ್ತಿಯಾಗಿ ತಿರುಗುತ್ತಿರುವ ಜೀವನು ತನ್ನ ಜೀವನದ ಬಹಳಷ್ಟು ಭಾಗವನ್ನು (ಅನಂತಕಾಲವನ್ನು) ನಿಗೋದದಲ್ಲಿಯೇ ಕಳೆದಿದ್ದಾನೆ. ಅಲ್ಲಿ ಅಕ್ಷರದ ಅನಂತನೆಯ ಒಂದು ಭಾಗದಷ್ಟು ಜ್ಞಾನವು ಪ್ರಕಟವಿರುತ್ತದೆ ಮತ್ತು ಒಂದು ಶ್ವಾಸದ ಹದಿನೆಂಟನೆಯ ಒಂದು ಭಾಗದಷ್ಟು ಜೀವನವಿರುತ್ತದೆ ಆದರೆ ಅಲ್ಲಿ ವಾಸ ಮಾಡುವ ಕಾಲವು ಅನಂತವಿರುತ್ತದೆ. ಅಲ್ಲಿ ಸ್ವತಂತ್ರವಾದ-ತನ್ನದೇ ಆದ ಶರೀರವು ಕೂಡ ಇರುವುದಿಲ್ಲ. ಅಂಥ ನಿಗೋದ ಅವಸ್ಥೆಯಲ್ಲಿ ಜೀವನು ಭೋಗಿಸುವ ದುಃಖದ ಕಥನವನ್ನಂತೂ ಕೇವಲೀ ಭಗವಂತರು ಕೂಡ ಸಂಪೂರ್ಣ ರೂಪದಿಂದ ಮಾಡುವ ಸಾಧ್ಯತೆಯಿಲ್ಲ; ಕೇವಲಜ್ಞಾನದಿಂದ ತಿಳಿಯುವುದು ಮಾತ್ರ ಸಾಧ್ಯವಿದೆ.

ಅಲ್ಲಿಂದ ಹೊರ ಹೊರಟ ಜೀವನು ಪಂಚಸ್ಥಾವರಗಳಲ್ಲಿ ಅಸಂಖ್ಯ ಪುದ್ಗಲ ಪುರಾವರ್ತನಗಳ ಕಾಲ ಉಳಿಯುತ್ತಾನೆ. ಒಂದು ಪುದ್ಗಲ ಪರಾವರ್ತನದಲ್ಲಿ ಅನಂತ ಸಾಗರಗಳಿವೆ. ಅಲ್ಲಿಯೂ ಅವನಿಗೆ ಒಂದು ಸ್ಪರ್ಶನೇಂದ್ರಿಯದಿಂದ ಪರಪದಾರ್ಥಗಳ ಅವಸ್ಥೆಯನ್ನು ತಿಳಿಯುವಷ್ಟು ಜ್ಞಾನದ ವಿಕಾಸವಿದೆ. ದುಃಖವು ಅನಂತವಿದೆ. ಸ್ವತಂತ್ರವಾದ ಶರೀರವಿದೆ; ಇಷ್ಟು ಮಾತ್ರ ಪ್ರಗತಿಯಾಗಿದೆ. ಅಲ್ಲಿರಬೇಕಾದ ಕಾಲವನ್ನು ಪೂರ್ಣ ಮಾಡಿ ಪರಿಣಾಮದಲ್ಲಿ ಬದಲಾವಣೆ ತಂದುಕೊಳ್ಳುವ ರೂಪದ ಪುರುಷಾರ್ಥವನ್ನು ಆ ಜೀವನು ಸ್ವಯಂ ಮಾಡಿದರೆ ಚಿಂತಾಮಣಿಗೆ ಸಮನಾದ ತ್ರಸ ಅವಸ್ಥೆಗೆ ಬರುತ್ತಾನೆ ಎಂದರೆ ದ್ವೀಂದ್ರಿಯ ಶರೀರ ಪ್ರಾಪ್ತಮಾಡಿಕೊಳ್ಳುತ್ತಾನೆ. ನಂತರ ತ್ರೀಂದ್ರಿಯ ಶರೀರ, ಅದರನಂತರ ಚತುರಿಂದ್ರಿಯ ಶರೀರದ ಪ್ರಾಪ್ತಿ ಮಾಡಿಕೊಳ್ಳುತ್ತಾನೆ ಕೊನೆಗೆ ಅಸಂಜ್ಞೀ ಪಂಚೇಂದ್ರಿಯನಾಗುತ್ತಾನೆ. ಯಾವ ಪ್ರಕಾರ ಪಂಚ ಸ್ಥಾವರ (ಪೃಥ್ವೀ ಜಲ, ವಾಯು, ಅಗ್ನಿ ಮತ್ತು ವನಸ್ಪತಿಕಾಯ) ದಲ್ಲಿ ಅನಂತಕಾಲ ಉಳಿಯುತ್ತಾನೆ ಅದೇ ಪ್ರಕಾರ ಎರಡು, ಮೂರು, ನಾಲ್ಕು ಮತ್ತು ಮನರಹಿತ ಐದು ಇಂದ್ರಿಯದ ಶರೀರಗಳಲ್ಲಿ ಪ್ರತಿಯೊಂದರಲ್ಲಿ ಅಸಂಖ್ಯ ಕಾಲವಿರುತ್ತ ಅಸಂಖ್ಯ

ಜನ್ಮ-ಮರಣಗಳನ್ನು ಮಾಡುತ್ತ ಅನಂತ ದುಃಖಿಯಾಗುತ್ತಾನೆ. ನಿಗೋದದಿಂದ ಹೊರಟ ಜೀವನು ಕ್ರಮದಿಂದ ಈ ಅವಸ್ಥೆಗಳಿಗೆ ಬಂದೇ ಬರುತ್ತಾನೆಂಬುದು ನಿಯಮವಿಲ್ಲ. ಸ್ಥಾವರ ಅವಸ್ಥೆಗೆ ಬಂದು ಅಲ್ಲಿರಬೇಕಾದ ಕಾಲವನ್ನು ಪೂರ್ಣಮಾಡಿ ಪುನಃ ನಿಗೋದಕ್ಕೆ ಹೋಗಬಹುದು. ತ್ರಸ ಅವಸ್ಥೆಗೆ ಬಂದು ಕೇವಲ ಒಂದು ಅಂತರ್ಮುಹೂರ್ತ ಕಳೆದು ಪುನಃ ನಿಗೋದಕ್ಕೆ ಹೋಗಬಹುದು. ಕ್ರಮದಿಂದ ಪ್ರಗತಿ ಹೊಂದುತ್ತ ವಿಕಲೇಂದ್ರಿಯ ಅವಸ್ಥೆಗೆ ಬಂದು ಮತ್ತೆ ನಿಗೋದಕ್ಕೆ ಹೋಗಬಹುದು. ಇತರ ವಿಕಲೇಂದ್ರಿಯ, ಪಂಚೇಂದ್ರಿಯ ಗತಿಗಳಲ್ಲಿ ಈ ಜೀವನು ವಾಸ ಮಾಡುವ ಕಾಲಕ್ಕೆ ಮಿತಿಯಿದೆ ಆದರೆ ಆ ನಿಗೋದದಲ್ಲಿ ವಾಸ ಮಾಡುವ ಕಾಲವು ಅಪರಿಮಿತವಿದೆ - ಅನಂತವಿದೆ.

ಈ ಪ್ರಕಾರ ಇಂಥ ಸಂಸಾರರೂಪದ ಘೋರ ಕಾನನದಲ್ಲಿ ಸುತ್ತುತ್ತಿರುವ ಜೀವನು ಎಂದೋ ಒಮ್ಮೆ ಭಾಗ್ಯವಶದಿಂದ ಮನಸಹಿತ (ಸಂಜ್ಞಿ) ಪಂಚೇಂದ್ರಿಯ ಪಶುವಾಗುತ್ತಾನೆ. ಆದರೆ ಅಲ್ಲಿಯೂ ಪ್ರಾಪ್ತಶರೀರದ ಪೋಷಣೆಯಿಂದಲೇ ಹಿತವಿದೆಯೆನ್ನುವ ವಿಚಾರದಲ್ಲಿ ತನ್ನ ಜ್ಞಾನವನ್ನು ತೊಡಗಿಸಿ ನಿರ್ಬಲ ಪ್ರಾಣಿಗಳನ್ನು ಸಾಯಿಸಿ ತಿಂದು ತಿಂದು ಸಂಕ್ಲೇಶ ಪರಿಣಾಮದಿಂದ ಪಾಪದ ಭಾರವನ್ನೇ ಹೊತ್ತುಕೊಂಡು ನರಕಕ್ಕೆ ಇಳಿಯುತ್ತಾನೆ. ಅಲ್ಲಿಯ ವೈತರಣಿನದಿ, ಶಾಲ್ಮಲಿ ವೃಕ್ಷ, ದುರ್ಗಂಧಯುತವಾದ ಮಣ್ಣು, ಅಸಹ್ಯವಾದ ಹಸಿವು, ತಾಳಲಾರದ ಬಾಯಾರಿಕೆ, ಶರೀರವು ಛಿನ್ನ-ಭಿನ್ನವಾಗಿ ಹೋದರೂ ಕ್ಷಣಾರ್ಧದಲ್ಲಿ ಪಾರಜದಂತೆ ಮತ್ತೆ ಕೂಡಿಕೊಳ್ಳುವುದು, ಪರಸ್ಪರರಲ್ಲಿ ನಿರಂತರ ಕಾದಾಟ, ಕರ್ಕಶ ಶಬ್ದ, ಕೂಗಾಟ, ಚೀತ್ಕಾರ ಇವೆಲ್ಲವುಗಳಿಂದ ಸೋತು ಕಂಗಾಲಾಗಿ ಹೋದ ನಾರಕೀ ಜೀವನು ಅಲ್ಲಿಂದ ಸತ್ತು ಹೋಗಲು ಬಯಸುತ್ತಾನೆ. ಆದರೇನು ಮಾಡುವುದು ಅಲ್ಲಿಯ ಆಯು ಪೂರ್ಣವಾಗದೆ ಮರಣವೂ ಸಾಧ್ಯವಿಲ್ಲ. (ಯಾವ ಗತಿಯಲ್ಲಿಯೂ ಆಯು ಪೂರ್ಣವಾದಲ್ಲದೆ ದೇಹವಿಯೋಗರೂಪದ ಮರಣವಾಗುವುದಿಲ್ಲ) ಆಗ ನಿರುಪಾಯನಾಗಿ ಪ್ರಾಪ್ತದುಃಖವನ್ನು ಭೋಗಿಸುತ್ತಿರುತ್ತಾನೆ. ಆದರೆ ತೀವ್ರ ಪಾಪರೂಪದ ಪರಿಣಾಮ ಮಾಡುವುದಿಲ್ಲ





ಅಂಥ ಸಮಯದಲ್ಲಿ ಅವನಿಗೆ ಮನುಷ್ಯಗತಿಯ ಬಂಧವಾಗಬಹುದು. ಹಾಗೆ ಮನುಷ್ಯ ಆಯುವಿನೊಂದಿಗೆ ಇಲ್ಲಿ ಬಂದು ಮನುಷ್ಯನಾಗಿ ಹುಟ್ಟುತ್ತಾನೆ. ಇಷ್ಟೆಲ್ಲ ಅಪಾರ-ವರ್ಣನಾತೀತವಾದ ದುಃಖವನ್ನು ಅನಂತ ಕಾಲದವರೆಗೆ ಭೋಗಿಸಿದ್ದರೂ ಇಲ್ಲಿ ಬಂದು ಅದನ್ನೆಲ್ಲ ಮರೆತು ಬಿಡುತ್ತಾನೆ.

ತೀವ್ರ ಪಾಪರೂಪದ ಪರಿಣಾಮಗಳಿಂದ ಭಿನ್ನವಾಗುವುದರ ಫಲಸ್ವರೂಪವಾಗಿಯೇ ಪ್ರಾಪ್ತವಾದ ಈ ಮನುಷ್ಯ ಭವ, ಉತ್ತಮ ಕುಲ, ಇಂದ್ರಿಯಗಳ ಪರಿಪೂರ್ಣತೆ, ರೋಗರಹಿತ ಶರೀರ, ಕ್ಲೇಶರಹಿತ ಜೀವನ ಇವೆಲ್ಲವೂ ಸಂಸಾರದಿಂದ ಬಿಡುಗಡೆ ಹೊಂದುವ ಸಲುವಾಗಿಯೇ, ಅನಂತ ದುಃಖ ಪರಂಪರೆಗೆ ಅಂತ್ಯ ಮಂಗಲ ಹಾಡುವ ಸಲುವಾಗಿಯೇ ಪ್ರಾಪ್ತವಾಗಿವೆಯೆಂಬುದನ್ನು ವಿಚಾರ ಮಾಡುವಂಥವನ ಸಂಜ್ಞಿತ್ವವು (ಮನಸ್ಸು) ಸಫಲವಿದೆ. ಅಂಥ ಜೀವನು ಸ್ವಯಂ ಅಶಾಂತಮಯ ಸಂಯೋಗಗಳಿಂದ ಸುಖದ ಸ್ವರೂಪವು ಬೇರೆಯೇ ಇರಬೇಕೆಂದು ವಿಚಾರ ಮಾಡುತ್ತಾನೆ. ಈ ನಿರೋಗ ಶರೀರ, ಪತ್ನಿ, ಪುತ್ರ, ಪರಿವಾರ, ಧನಾದಿಗಳ ವೈಭವಗಳಲ್ಲಿ ತನ್ನದೇನೂ ಕಾರ್ಯ ನಡೆಯುವುದಿಲ್ಲೆಂಬುದು ಭಾಸವಾಗುತ್ತದೆ. ಆಗ ಅವನು ಉತ್ತಮ ಕುಲದ ಮಹಿಮೆಯನ್ನು ತಿಳಿದುಕೊಳ್ಳುವುದರಲ್ಲಿ ತೊಡಗುತ್ತಾನೆ.

ವೀತರಾಗ ದೇವರ ದರ್ಶನದ ಮೂಲಕ ರಾಗ ಮೊದಲಾದ ತನ್ನ ವಿಕಾರಗಳ ಪರಿಚಯವು ಯಾವಾಗ ಅವನಿಗೆ ವಿಕಲ್ಪದಲ್ಲಿ ತಿಳಿಯಲಾರಂಭಿಸುತ್ತದೆ ಆಗ ವೀತರಾಗತೆಯ ಪೋಷಕವೂ ಹಾಗೂ ರಾಗ ಮೊದಲಾದ ಮಲಿನ ಭಾವಗಳಿಂದ ಬಿಡುಗಡೆ ಹೊಂದುವುದರಲ್ಲಿ ಸಹಕಾರಿಯೂ ಆದ ಜಿನಾಗಮಗಳ ಅಧ್ಯಯನ ಮಾಡುತ್ತಾನೆ. ಆಗ ಅವನಿಗೆ ತನ್ನ ಪ್ರಯೋಜನಭೂತ ಮೋಕ್ಷಮಾರ್ಗದ, ದೇವ-ಗುರು-ಧರ್ಮದ ಹಾಗೂ ಜೀವ-ಅಜೀವ ಮೊದಲಾದ ತತ್ತ್ವಗಳ, ಸ್ವ ಮತ್ತು ಪರಗಳ, ತನಗೆ ಹಿತರೂಪ ಹಾಗೂ ಅಹಿತರೂಪ ಭಾವಗಳ ಪರಿಚಯರೂಪದ ಉಪದೇಶದಿಂದ ಸಾವಧಾನವಾಗಿ ಓಹೋ ! ನನಗಂತೂ ಈ ಮಾತುಗಳ ಅರಿವೇ ಇರಲಿಲ್ಲ. ನಾನು ಭ್ರಾಂತಿಯಿಂದ

ನನ್ನನ್ನೇ ಮರೆತು ಪ್ರಾಪ್ತವಾದ ಪರ್ಯಾಯದಲ್ಲಿ ತನ್ಮಯನಾಗಿ ಹೋಗಿರುವೆ. ಈ ಪರ್ಯಾಯದ ಸ್ಥಿತಿಯು ಅಲ್ಪ ಸಮಯದ್ದೇ ಇದೆ. ಈಗ ಇಲ್ಲಿ ನನಗೆ ಎಲ್ಲ ನಿಮಿತ್ತಗಳು ಪ್ರಾಪ್ತವಾಗಿವೆ. ಈ ಉಪದೇಶದ ಮೂಲಕ ನಾನು ನನ್ನ ಹಿತ ಮಾಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬರುತ್ತಾನೆ.

ಸಮಸ್ತ ಸಂಸಾರದಿಂದ ಎಂದರೆ ಸಂಯೋಗಗಳಿಂದ ಉದಾಸೀನ ನಾಗುತ್ತ ಹೋಗುತ್ತಾನೆ. ಬಾಹ್ಯದ ಅಭಿರುಚಿಯು ಕಮ್ಮಿಯಾದಷ್ಟು ಅಂತರ್ಯದಲ್ಲಿ ಜ್ಞಾನದ ಕಾರ್ಯವು ಚುರುಕುಗೊಳ್ಳುತ್ತದೆ ತನ್ನಲ್ಲಿ ಸಮಯ-ಸಮಯಕ್ಕೆ ಉತ್ಪನ್ನವಾಗುವ ಅಶುದ್ಧ ಭಾವಗಳು ಮತ್ತು ಅವುಗಳಿಂದ ಪ್ರಾಪ್ತವಾಗುವ ಆಕುಲತೆಯ ಪರಿಚಯವಾಗುತ್ತದೆ. ಎಲ್ಲಿಯವರೆಗೆ ಜ್ಞಾನವು ಪರದಿಂದ ಬಿಡುಗಡೆ ಹೊಂದಿ ತನ್ನಲ್ಲಿ -ಜ್ಞಾನದಲ್ಲಿ ಉಳಿಯುವುದಿಲ್ಲ ಅಲ್ಲಿಯವರೆಗೆ ನಿರಂತರ ಭೇದಜ್ಞಾನದ ವಿಚಾರ ಮಾಡುತ್ತಿರುತ್ತಾನೆ. ಅದರಿಂದ ಅವನಿಗೆ ಉತ್ಸಾಹವೇ ವೃದ್ಧಿಸುತ್ತದೆ. ಆಗ ಬಾಹ್ಯದ ವೈಭವಗಳಲ್ಲಿ ತನ್ನ ಇಚ್ಛೆಗೆ ಅನುಕೂಲವಾಗಿ ಆಗುತ್ತಿರುವ ಪರದ್ರವ್ಯದ ಕಾರ್ಯಗಳ ಕುರಿತು ಆತನ ಅಹಂಬುದ್ಧಿಯು ಹೊರಟು ಹೋಗುತ್ತದೆ. ಪರಪದಾರ್ಥಗಳಲ್ಲಿ ಆಗುತ್ತಿರುವ ಪ್ರತಿ ಸಮಯದ ಪರಿಣಮನವು ಸ್ವತಂತ್ರವಾಗಿರುವುದು ಸ್ಪಷ್ಟರೂಪದಿಂದ ತಿಳಿಯಲಾರಂಭಿಸುತ್ತದೆ. ಹೀಗಾಗಿ ವಿಕಲ್ಪಗಳ ತೀವ್ರತೆಯು ಮಂದವಾಗುತ್ತದೆ. ನಿರಂತರ ಪರಿಣಾಮದ ಮಲಿನತೆಯನ್ನು ದೂರ ಮಾಡುವ ಉದ್ಯಮ ಮಾಡುತ್ತಿರುತ್ತಾನೆ. ಎಂದರೆ ಅವನು ಕೇವಲ ತಿಳಿಯುವ ಪ್ರಯತ್ನ ಮಾಡುತ್ತಾನೆ - ಎಂದರೆ ಕರ್ತೃತ್ವದ ಮನೋಭಾವವನ್ನು ಬಿಟ್ಟು ಕೊಡುತ್ತಾನೆ, ಆಗ ಅವನ ದೃಷ್ಟಿಯು ಅಂತರ್ಮುಖವಾಗುತ್ತದೆ.

ಹೀಗೆ ನಿರಂತರದ ಪುರುಷಾರ್ಥದಿಂದ ಜೀವನು (ಮನುಷ್ಯನು) ಅನಾದಿಯಿಂದ ಅಪ್ರಾಪ್ತವೂ, ಅನಂತ ದುಃಖದ ದಾಹವನ್ನು ತಣಿಸುವಂಥದೂ, ಮೋಕ್ಷರೂಪ ಮಹಲಿನ ಪ್ರಥಮ ಮೆಟ್ಟಿಲೂ ಆದ ಸಮ್ಯಗ್ದರ್ಶನವನ್ನು (ಆತ್ಮಾನುಭೂತಿಯನ್ನು) ಪಡೆಯುತ್ತಾನೆ. ಮೂರು ಲೋಕ ಮೂರು ಕಾಲಗಳಲ್ಲಿ ಈ ಜೀವನಿಗೆ ಮಿತ್ರಸ್ವರೂಪವಿರುವಂಥ ಸಮ್ಯಗ್ದರ್ಶನವನ್ನು ಪಡೆದು ಅವನು





ಧನ್ಯನಾಗುತ್ತಾನೆ. ಆಗ ಆ ಮಹಾತ್ಮನಿಗೆ ಈ ಸಂಪೂರ್ಣ ವಿಶ್ವವು (ಅನಂತ ಜೀವ, ಅನಂತಾನಂತ ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ, ಅದರಂತೆ ಅಸಂಖ್ಯ ಅರಹಂತರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು ಅಲ್ಲದೆ ಅನಂತ ಸಿದ್ಧರುಗಳಿಂದ ಯುಕ್ತವಾದುದು) ತನ್ನಿಂದ ಭಿನ್ನವಿದೆ, ಈ ವಿಶ್ವದ ಯಾವ ವಸ್ತುವು ತನ್ನ ಸುಖದ ಕಾರಣವಿಲ್ಲವೆಂಬ ಮಾತಿನದು ಅನುಭವಪೂರ್ವಕ ನಿರ್ಣಯವಾಗುತ್ತದೆ. ಅವನ ಅಂತರ್ಯದ ದಶೆಯು ಸಂಪೂರ್ಣವಾಗಿ ಬದಲಾವಣೆಯಾಗಿ ಬಿಡುತ್ತದೆ.

ಜೈನ ಕುಲೋತ್ಪನ್ನನಾದ ಜೀವನು ಸಮ್ಯಗ್ದರ್ಶನದ ನಂತರವೇ ನಿಜವಾಗಿ ಜೈನತ್ವದ ಅಂಶದಿಂದ ಯುಕ್ತನಾಗುತ್ತಾನೆ.

## ಸಮ್ಯಗ್ದರ್ಶನದ ಮಹಿಮೆ

ಆ ಸಮ್ಯಗ್ದರ್ಶನವು ಎಂಥ ಮಹಿಮೆಯುಳ್ಳದ್ದಿದೆಯೆಂಬುದನ್ನು ಆಗಮಗಳ ಅವಲೋಕನ ಮಾಡಿ ತಿಳಿಯೋಣ.

ಕಲಿಕಾಲದ ಸರ್ವಜ್ಞರೆನಿಸಿದ ಭಗವಾನ ಶ್ರೀ ಕುಂದಕುಂದ ಪ್ರಭುಗಳು ಹೇಳುತ್ತಾರೆ. -

ದಂಸಣಮೂಲೋಧಮ್ಮೋ ಉವಇಟ್ಠೋ ಜಿಣವರೇಹಿಂ ಸಿಸ್ಸಾಣಂ ।
ತಂ ಸೋಊಣ ಸಕಣ್ಣೇ ದಂಸಣಹೀಣೋ ಣ ವಂದಿವ್ವೋ ॥

ಅಷ್ಟಪಾಹುಡ - 2

ಎಂದರೆ ಆ ಜಿನವರರುಗಳಾದ ಸರ್ವಜ್ಞದೇವರು ಆ ಗಣಧರ ಮೊದಲಾದ ಶಿಷ್ಯರಿಗೆ ದರ್ಶನವು ಮೂಲವಿರುವಂಥ ಧರ್ಮದ ಉಪದೇಶ ಕೊಟ್ಟಿದ್ದಾರೆ. ಯಾವ ಪ್ರಕಾರ ಮಂದಿರದ ಅಡಿಪಾಯ ಮತ್ತು ವೃಕ್ಷದ ತಳಹದಿಯು ಮೂಲವಿರುತ್ತದೆ. ಅದೇ ಪ್ರಕಾರ ಧರ್ಮದ ಮೂಲವು ದರ್ಶನವಿದೆ. ಯಾವ ಪ್ರಕಾರ ಮೂಲವಿಲ್ಲದ ವೃಕ್ಷದಿಂದ ಸ್ಕಂಧ, ಶಾಖೆ, ಫಲ, ಪುಷ್ಪಗಳ

ಪ್ರಾಪ್ತಿಯಾಗುವುದಿಲ್ಲವೋ ಅದೇ ಪ್ರಕಾರ ಸಮ್ಯಗ್ದರ್ಶನರೂಪ ಧರ್ಮದ ಮೂಲವಿಲ್ಲದೆ ಸಮ್ಯಗ್ಜ್ಞಾನ, ಸಮ್ಯಕ್ ಚಾರಿತ್ರವಾಗಲಿ ಅಥವಾ ಶ್ರಾವಕಧರ್ಮ, ಮುನಿಧರ್ಮಗಳಾಗಲಿ ಪ್ರಾಪ್ತವಾಗುವುದಿಲ್ಲ ಮತ್ತು ಧರ್ಮವಿಲ್ಲದೆ ಸುಖ ಎಂದರೆ ಬಂಧನದ ಬಿಡುಗಡೆ (ಮುಕ್ತಿ) ಯಾಗುವ ಸಾಧ್ಯತೆಯಿಲ್ಲ.

ಅಂತೆಯೇ ಶ್ರೀ ಉಮಾಸ್ವಾಮಿ ಭಗವಂತರು ತತ್ವಾರ್ಥಸೂತ್ರದ ಮೊದಲನೆಯ ಸೂತ್ರದಲ್ಲಿಯೇ '' ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ '' ಎಂದು ಹೇಳಿದ್ದಾರೆ. ಸಮ್ಯಗ್ದರ್ಶನ ಸಹಿತವಾದ ಜ್ಞಾನ-ಚಾರಿತ್ರಗಳೇ ಮೋಕ್ಷದ ಮಾರ್ಗವಿದೆಯೆಂದು ಘಂಟಾಘೋಷವಾಗಿ ಸಾರಿದ್ದಾರೆ.

ಸ್ವಾಮಿ ಸಮಂತಭದ್ರಾಚಾರ್ಯದೇವರು ರತ್ನಕರಂಡ ಶ್ರಾವಕಾಚಾರದ ಎರಡನೇ ಶ್ಲೋಕದಲ್ಲಿ ಸಮೀಚಿನ ಧರ್ಮ ಹೇಳುವ ಪ್ರತಿಜ್ಞೆ ಮಾಡುತ್ತಾರೆ. ನಂತರ ಮೂರನೆಯ ಶ್ಲೋಕದಲ್ಲಿಯೇ ಹೀಗೆ ಹೇಳುತ್ತಾರೆ -

ಸದ್ದೃಷ್ಟಿಜ್ಞಾನವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದುಃ ।
ಯದೀಯಪ್ರತ್ಯನೀಕಾನಿ ಭವಂತಿ ಭವ ಪದ್ಧತಿ ॥

ಸದ್ದೃಷ್ಟಿ - ಸಮ್ಯಗ್ದರ್ಶನ, ಎಂದರೆ ಸಮ್ಯಗ್ದರ್ಶನದಿಂದ ಯುಕ್ತವಾದ ಜ್ಞಾನ ಮತ್ತು ವೃತ್ತ ಅರ್ಥಾತ್ ಚಾರಿತ್ರಗಳೇ ಧರ್ಮರೂಪವಿದ್ದು, ಸಮ್ಯಗ್ದರ್ಶನವಿಲ್ಲದ ಜ್ಞಾನವಾಗಲಿ, ಸಮ್ಯಗ್ದರ್ಶನವಿಲ್ಲದ ಚಾರಿತ್ರವಾಗಲಿ ಅವು ಭವಪದ್ಧತಿಗೆ ಎಂದರೆ ಸಂಸಾರ ಪರಿಪಾಟಿಗೆ, ಸಂಸಾರದಲ್ಲಿ ಸುತ್ತಾಡುವುದಕ್ಕೇನೇ ಭವಂತಿ ಎಂದರೆ ಕಾರಣವಾಗುತ್ತವೆ.

ಇನ್ನು ಸ್ವಾಮಿ ಕಾರ್ತಿಕೇಯ ಮುನಿಗಳು ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೇಳುತ್ತಾರೆ -

ರಯಣಾಣಮಹಾರಯಣಂ, ಸವ್ವಜೋಯಾಣಉತ್ತಮಂ ಜೋಯಂ ।
ರಿದ್ಧೀಣ ಮಹಾರಿದ್ಧಿ, ಸಮ್ಮತ್ತಂ ಸವ್ವ ಸಿದ್ಧಿಯರಂ ॥325॥





ಎಂದರೆ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳ ಅಭೇದರೂಪವಾದ ಸಮ್ಯಕ್ತ್ವವು ಸಮಸ್ತ ರತ್ನಗಳಲ್ಲಿ ಮಹಾರತ್ನವಿದೆ. ಎಲ್ಲ ಯೋಗಗಳಲ್ಲಿ (ವಸ್ತುವಿನಸಿದ್ಧಿ ಮಾಡುವ ಉಪಾಯ, ಮಂತ್ರ, ಧ್ಯಾನ ಮೊದಲಾದವುಗಳಲ್ಲಿ) ಉತ್ತಮ ಯೋಗವಿದೆ. ಏಕೆಂದರೆ ಸಮ್ಯಕ್ತ್ವದಿಂದ ಮೋಕ್ಷದ ಸಿದ್ಧಿಯಾಗುತ್ತದೆ. ಅಣಿಮಾ, ಮಹಿಮಾ ಮೊದಲಾದ ಋದ್ಧಿಗಳಲ್ಲಿ ಎಲ್ಲಕ್ಕಿಂತ ದೊಡ್ಡ ಋದ್ಧಿಯಿದೆ. ಹೆಚ್ಚೇನು ಹೇಳುವುದು ಸಮಸ್ತ ಸಿದ್ಧಿಗೆ ಸಮ್ಯಕ್ತ್ವವೇ ಕಾರಣವಿದೆ.

ಆಚಾರ್ಯ ಶ್ರೀ ಯೋಗೀಂದುದೇವರು ಸಮ್ಯಗ್ದರ್ಶನದ ಮಹಿಮೆ ಹೇಳುತ್ತ ಯೋಗಸಾರ ಗ್ರಂಥದಲ್ಲಿ ಹೇಳುವುದೇನೆಂದರೆ -

ಕಾಲ ಅನಾದಿ, ಜೀವ ಅನಾದಿ ಭವಸಾಗರ ತಾನಂತವಿದೆ ।
ಸಲೆ ಮಿಥ್ಯಾಮೋಹದಿ ತಾ ಸುಖವಿನ ದುಃಖವ ಪಡೆದಿಹುದು ॥

ಎಂದರೆ ಜೀವನು ಅನಾದಿಕಾಲದಿಂದ ಅನಂತವೂ ಅಪಾರವೂ ಇರುವ ಈ ಭವಸಮುದ್ರದಲ್ಲಿ ಒಂದು ಸಮ್ಯಗ್ದರ್ಶನದ ಅಭಾವದಿಂದಲೇ ಭ್ರಮಿಸುತ್ತಾನೆ ಮತ್ತು ಕೇವಲ ದುಃಖವನ್ನೇ ಪಡೆದಿದ್ದಾನೆಂಬುದು ಸತ್ಯವಿದೆ. ಸ್ವತತ್ತ್ವದ ಪರಿಚಯ - ಅನುಭವರೂಪದ ಯಾವ ಸಮ್ಯಗ್ದರ್ಶನವಿದೆ ಅದರಿಂದ ಬಾಹ್ಯವಿರುವ ಜೀವನು ದುಃಖವನ್ನಲ್ಲದೆ ಇನ್ನೇನು ಪಡೆಯಲು ಸಾಧ್ಯವಿದೆ. ಸುಖದ ನಿಧಿಯಾದ ನಿಜಾತ್ಮನ ಅನುಭವರೂಪದ ಸಮ್ಯಗ್ದರ್ಶನವಿಲ್ಲದೆ ಅವನು ವಿಶ್ವದ ಸಮಸ್ತ ಜಡವೈಭವವನ್ನು ಒಟ್ಟುಗೂಡಿಸುವ ಮಿಥ್ಯಾ ಮೋಹದಿಂದ ಸುಖಿಯಾಗುವುದು ಅಸಂಭವವಿದೆ. ಪರಿಣಮನಶೀಲವಾದ ಪದಾರ್ಥಗಳ ಆಶ್ರಯದಿಂದ ಸಂಸಾರದ ಸುತ್ತಾಟವೆಂದೂ ನಿಲ್ಲದು. ಸಮ್ಯಗ್ದರ್ಶನ ಎಂದರೆ ತ್ರಿಕಾಲಿ ಶಾಶ್ವತ ಆತ್ಮನ ಶ್ರದ್ಧೆ-ಅನುಭೂತಿಯು ನಿರಾಕುಲ ಸುಖಕ್ಕೆ ಹಾಗೂ ಶಾಶ್ವತ ಅವಸ್ಥೆಗೆ (ಮೋಕ್ಷಕ್ಕೆ) ಕಾರಣವಿದೆ.

ಇನ್ನು ಶ್ರೀ ಪದ್ಮನಂದಿ ಪ್ರಭುಗಳು ಪದ್ಮನಂದಿ-ಪಂಚವಿಂಶತಿಯಲ್ಲಿ ಹೀಗೆ ಹೇಳುತ್ತಾರೆ -

ಜಯತಿ ಸುಖನಿಧಾನಂ ಮೋಕ್ಷ ವೃಕ್ಷೈಕ ಬೀಜಂ
ಸಕಲ ಮಲ ವಿಮುಕ್ತಂ ದರ್ಶನಂ ಯದ್ವಿನಾ ಸ್ಯಾತ್ ।
ಮತಿರತಿ ಕುಮತಿರ್ನು ದುಶ್ಚರಿತ್ರಂ ಚರಿತ್ರಂ
ಭವತಿ ಮನುಜಜನ್ಮ ಪ್ರಾಪ್ತಮಪ್ರಾಪ್ತಮೇವ ॥77॥

ಧರ್ಮೋಪದೇಶಾಮೃತ

ಅರ್ಥ :- ಸಮ್ಯಗ್ದರ್ಶನವಿಲ್ಲದೆ ಜ್ಞಾನವು ಮಿಥ್ಯಾಜ್ಞಾನವಿದೆ ಮತ್ತು ಚಾರಿತ್ರವು ಮಿಥ್ಯಾಚಾರಿತ್ರವಾಗಿ ಪರಿಣಮಿಸುತ್ತದೆ. ಆದರೆ ಸುಖದ ಸ್ಥಾನಭೂತವೂ, ಮೋಕ್ಷರೂಪ ವೃಕ್ಷದ ಅದ್ವಿತೀಯ ಬೀಜಸ್ವರೂಪವೂ ಮತ್ತು ಸಮಸ್ತ ದೋಷಗಳಿಂದ ರಹಿತವೂ ಆದ ಸಮ್ಯಗ್ದರ್ಶನವು ಜಯವಂತವಾಗಿ ವರ್ತಿಸುತ್ತದೆ. ಎಂದರೆ ಸಮ್ಯಗ್ದರ್ಶನ ಸಹಿತ ಜೀವದ ಪರಿಣಾಮವನ್ನು ಯಾವುದೇ ಸಂಯೋಗವಾಗಲಿ ಎಂತಹುದೇ ಉದಯವಾಗಲಿ ವಿಪರೀತವನ್ನಾಗಿ ಮಾಡುವುದಿಲ್ಲ (ಪರಾಜಿತಗೊಳಿಸುವುದಿಲ್ಲ) ಇಂಥ ಸಮ್ಯಗ್ದರ್ಶನವನ್ನು ಪ್ರಾಪ್ತ ಮಾಡಿಕೊಳ್ಳದಿದ್ದರೆ ಮನುಷ್ಯ ಜನ್ಮವನ್ನೇ ಪ್ರಾಪ್ತ ಮಾಡಿಕೊಳ್ಳದ ಸಮಾನವಿದೆ. ಏಕೆಂದರೆ ಒಂದು ಸಮ್ಯಗ್ದರ್ಶನದ ಪ್ರಾಪ್ತಿಯಿಂದಲೇ ನಿಜವಾಗಿ ಮನುಷ್ಯ ಜನ್ಮದ ಸಾರ್ಥಕತೆಯಾಗುವ ಸಾಧ್ಯತೆಯಿದೆ.

ಇಷ್ಟೇ ಏಕೆ ಲಘು ಸಮಯಸಾರವೆಂದು ಖ್ಯಾತಿವೆತ್ತ ಆರುಗುರಾಣಿಯಲ್ಲಿ ಪಂ. ದೌಲತರಾಮರು ಹೇಳುತ್ತಾರೆ -

ಮೂರುಲೋಕದಿ ಮೂರುಕಾಲದಿ ಸಾರ ಸಮ್ಯಗ್ದರ್ಶನಕೆ ಸಮ ।
ಬೇರೆ ಯಾವುದು ಸುಖವ ಕೊಡುವಂತಹುದು ತಾನಿಲ್ಲ ॥





ಪಂ. ಟೋಡರಮಲ್ಲರು ಮೋಕ್ಷಮಾರ್ಗ ಪ್ರಕಾಶಕದಲ್ಲಿ ''ಇಸ ಭವತರು ಕಾ ಮೂಲ ಏಕ ಜಾನಹೂ ಮಿಥ್ಯಾ ಭಾವ'' ಎಂದಿದ್ದಾರೆ. ಎಂದರೆ ಸಮ್ಯಗ್ದರ್ಶನದ ಪ್ರಾಪ್ತಿಯಾಗುತ್ತಿದ್ದಂತೆಯೇ ಈ ಭವರೂಪದ ವೃಕ್ಷವು ಮೂಲ ರಹಿತವಾಗುತ್ತದೆ ಮತ್ತು ಉರುಳಿ ಬೀಳುತ್ತದೆ ಅಲ್ಲದೆ ಸ್ವಲ್ಪ ಕಾಲದಲ್ಲಿ ಒಣಗಿ ಹೋಗುತ್ತದೆಯೆಂಬ ಭಾವವು.

ರತ್ನಾಕರವರ್ಣಿಯಂತೂ ಸಮ್ಯಗ್ದರ್ಶನಯುಕ್ತ ನಿಜಾತ್ಮನನ್ನು ''ಸುಗುಣರದೇವ'' ನೆಂದಿದ್ದಾನೆ.

ಈ ಪ್ರಕಾರ ಸಮಸ್ತ ಜಿನಾಗಮಗಳು ಒಂದು ಸಮ್ಯಗ್ದರ್ಶನದ ಮಹಿಮೆಯಿಂದ ತುಂಬಿ ಹೋಗಿವೆ. ಸಂಸಾರೀ ಜೀವರುಗಳ ದುಃಖವನ್ನು ನೋಡಿ ಕರುಣಾಮಯರಾದ ಆಚಾರ್ಯ ಭಗವಂತರುಗಳು ಮತ್ತು ಜ್ಞಾನೀ ಮಹಾತ್ಮರುಗಳು ಸುಖದ ಸಲುವಾಗಿ ಅವರಿಗೆ (ನಮಗೆ) ಒಂದು ಸಮ್ಯಗ್ದರ್ಶನ ಪ್ರಾಪ್ತಿಯ ಪ್ರೇರಣೆಯನ್ನೇ ಕೊಟ್ಟಿದ್ದಾರೆ. ಏಕೆಂದರೆ ಸಮ್ಯಗ್ದರ್ಶನವಿಲ್ಲದೆ ಧರ್ಮದ ಆರಂಭವಾಗುವುದಿಲ್ಲ ಮತ್ತು ಧರ್ಮವಿಲ್ಲದೆ ಸುಖವು ದೊರಕುವುದಿಲ್ಲ.

ಬೃಹದ್ದ್ರವ್ಯಸಂಗ್ರಹಕಾರರಾದ ಶ್ರೀ ನೇಮಿಚಂದ ಸಿದ್ಧಾಂತಿದೇವರು ಆ ಸಮ್ಯಗ್ದರ್ಶನದ (ಅಭೇದ ರತ್ನತ್ರಯದ ಪ್ರಾಪ್ತಿಯ ಸಲುವಾಗಿ) ನಿಜಾತ್ಮನ ಆಶ್ರಯ ಮಾಡುವ ಮಾತನ್ನು ಅತ್ಯಂತ ಸುಂದರವಾಗಿ ಹೇಳಿದ್ದಾರೆ -

''ರಯಣತ್ತಯಂ ಣ ವಟ್ಟಯಿ ಅಪ್ಪಾಣಂ ಮುಯಿತ್ತು ಅಣ್ಣದವಿಯಮ್ಹಿ'' ಒಬ್ಬ ನಿಜಾತ್ಮನನ್ನು ಹೊರತು ಪಡಿಸಿ ರತ್ನತ್ರಯವು ಅನ್ಯ ಯಾವುದೇ ದ್ರವ್ಯದಲ್ಲಿ ವಾಸ ಮಾಡುವುದಿಲ್ಲ. ಅದಕ್ಕಾಗಿ ಧರ್ಮದ ಪ್ರಾಪ್ತಿಯ ಸಲುವಾಗಿ, ಧರ್ಮಾಚರಣೆಯ ಸಲುವಾಗಿ ಅಥವಾ ದುಃಖ ಮುಕ್ತಿಯ ಸಲುವಾಗಿ ಬಾಹ್ಯ ಪದಾರ್ಥಗಳ ಆಶ್ರಯ ಮಾಡುತ್ತಿರುವ ದುಃಖೀ ಜೀವರುಗಳ ಕುರಿತು ನೀನು ಬಾಹ್ಯ ವೈಭವದಿಂದಾಗಲಿ, ಬಾಹ್ಯ ಭಗವಂತನ ಆಶ್ರಯದಿಂದಾಗಲಿ ರತ್ನತ್ರಯವನ್ನು ಪಡೆಯುವ ಸಾಧ್ಯತೆಯಿಲ್ಲ. ಆದರೆ ಬಾಹ್ಯ ಭಗವಂತನ ಆದರ್ಶ ನೋಡಿ ನಿನ್ನಲ್ಲಿ ನೀನು ನಿನ್ನನ್ನು ಕಂಡುಕೊಳ್ಳು ಎಂದಿದ್ದಾರೆ.